ಕರ್ನಾಟಕ ವಿಧಾನ ಸಭೆ

ಬುಧವಾರ, 22ನೇ ಫೆಬ್ರವರಿ 1984

ಸದನವು ವಿಧಾನಸೌಧದಲ್ಲಿರುವ ವಿಧಾನಸಭಾ ಸಭಾಂಗಣದಲ್ಲಿ ಬೆಳಿಗ್ಗೆ ಒಂಬತ್ತು ಗಂಟೆಗೆ ಸಮವೇಶಗೊಂಡಿತು

ಅಧ್ಯಕ್ಷರು.--(ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಗುಲ್ಬರ್ಗ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು

289 (769) ಶ್ರೀ ನಾಗರೆಡ್ಡಿ ಲಚಮಾರೆಡ್ಡಿ ಪಾಟೀಲ್ (ಸೇಡಂ).--ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಗುಲ್ಬರ್ಗಾ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಎಷ್ಟು ಸರಕಾರಿ ಪ್ರಾಥಮಿಕ ಶಾಲೆಗಳಿವೆ ಹಾಗೂ ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ತಾಲೂಕಿನ ವಿವರಗಳನ್ನು ಬೇರೆ ಬೇರೆಯಾಗಿ ಒದಗಿಸುವುದು) ;

ಆ) ಗುಲಬರ್ಗಾ ಜಿಲ್ಲೆಯಲ್ಲಿ ಕಟ್ಟಡಗಳಿರುವ ಹಾಗೂ ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಕಟ್ಟಡವಿಲ್ಲದ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ತಾಲೂಕುವಾರು ವಿವರಗಳನ್ನು ಒದಗಿಸುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).--

ಅ) ಸರಕಾರಿ ಪ್ರಾಥಮಿಕ ಶಾಲೆಗಳು 1676

ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 2,14,877

(ತಾಲೂಕುವಾರು ಪಟ್ಟಿಯನ್ನು ಲಗತ್ತಿಸಿದೆ)

ಆ) ಕಟ್ಟಡಗಳಿರುವ ಶಾಲೆಗಳ ಸಂಖ್ಯೆ 1113

ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ 563

ಕಟ್ಟಡಗಳಿಲ್ಲದ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 54,273

ಗುಲ್ಬರ್ಗ ಜಿಲ್ಲೆಯಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳು, ಓದುತ್ತಿರುವ ವಿದ್ಯಾರ್ಥಿಗಳು

ಕಟ್ಟಡಗಳಿರುವ ಹಾಗೂ ಕಟ್ಟಡಗಳಿಲ್ಲದ ಶಾಲೆಗಳ ತಾಲ್ಲೂಕುವಾರು ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕು	ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಕಟ್ಟಡಗಳಿರುವ ಶಾಲೆಗಳ ಸಂಖ್ಯೆ	ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ	ಕಟ್ಟಡಗಳಿಲ್ಲದಿರುವ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ
1)	ಗುಲ್ಬರ್ಗ	214	40,541	98	116	20,377
2)	ಆಲಂದ್	169	27,411	70	99	10,860
3)	ಅಫಜಲ್‌ಪುರ	101	16,709	83	18	1,018
4)	ಜೇವರ್ಗಿ	149	16,810	95	54	976
5)	ಶಹಪುರ	171	20,151	106	65	2,974
6)	ಶೋರಾಪುರ	217	23,085	155	62	6,780
7)	ಚಿತ್ತಾಪುರ	188	23,443	113	75	1,125
8)	ಚಿಂಚೋಳಿ	156	12,531	148	8	1,972
9)	ಯಾದಗೀರ್	187	20,053	168	19	2,554
10)	ಸೇಡಂ	124	14,143	77	47	5,687
	ಒಟ್ಟು	1676	2,14,877	1113	563	54,273

ಶ್ರೀ ನಾಗರೆಡ್ಡಿ ಲಚಮಾರೆಡ್ಡಿ ಪಾಟೀಲ್.--ಗ್ರಾಮಾಂತರ ಪ್ರದೇಶದಲ್ಲಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 300 ವಿದ್ಯಾರ್ಥಿಗಳಿದ್ದರೂ ಕೂಡ ಕಟ್ಟಡ ಇಲ್ಲ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಕರ್ನಾಟಕ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 300 ವಿದ್ಯಾರ್ಥಿಗಳಿದ್ದರೂ ಕೂಡ ಕಟ್ಟಡ ಇಲ್ಲ. ಈಗ ಶಾಲೆ ನಡೆಯುತ್ತಾ ಇರುವುದು ಚಾವಡಿ ಮುಂತಾದ ಕಡೆಗಳಲ್ಲಿ. ಅಲ್ಲಿ 7ನೇ ತರಗತಿಯವರೆಗೆ ಶಾಲೆ ನಡೆಸುತ್ತಿದ್ದಾರೆ ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ಮೂರು ರೂಂಗಳನ್ನು ಕಟ್ಟಿದರೂ ಕೂಡ ವಿದ್ಯಾರ್ಥಿಗಳು ಅಲ್ಲಿ ಕೂರುವ ಪರಿಸ್ಥಿತಿಯಲ್ಲಿಲ್ಲ ಆದ್ದರಿಂದ ಈ ತೊಂದರೆಯನ್ನು ನಿವಾರಿಸಲು ಒಂದು ತಾಲ್ಲೂಕಿನಲ್ಲಿ ಎರಡು ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಲು ಈ ಬಜೆಟ್ಟಿನಲ್ಲಿ ಹಣ ಸೇರಿಸ ಬೇಕೆಂದು ಸವಿನಯ ಪ್ರಾರ್ಥನೆ.

ಶ್ರೀ ಬಿ. ರಾಚಯ್ಯ --1983-84ನೇ ಸಾಲಿಗೆ ಶಿಕ್ಷಣ ಇಲಾಖೆ ಪ್ರಾಥಮಿಕ ಶಾಲೆಗೆ 81 ಕಟ್ಟಡಗಳನ್ನು ಕಟ್ಟಲು ಗುಲ್ಬರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ 5,28,000 ರೂಪಾಯಿಗಳು 90 ಪೈಸೆಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಜಿಲ್ಲಾ ಮಟ್ಟದ ಯೋಜನೆಯಲ್ಲಿ 101 ಶಾಲಾ ಕಟ್ಟಡವನ್ನು ಕಟ್ಟಲು 25,21,000 ರೂಪಾಯಿಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. 1984-85ರಲ್ಲಿ ಕಟ್ಟಡಕ್ಕೆ ಅನುದಾನ ನೀಡಲು 100 ಲಕ್ಷ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಗೆ ಒದಗಿಸಿದ್ದು ಕಟ್ಟಡ ನಿರ್ಮಿಸಲು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ನಾಗರೆಡ್ಡಿ ಲಚಮಾರೆಡ್ಡಿ ಪಾಟೀಲ್ --ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ಒಂದು ಕೋಣೆಗೆ 6 ಸಾವಿರ ರೂಪಾಯಿ 9 ಸಾವಿರ ರೂಪಾಯಿ ಕೊಟ್ಟು ಕಟ್ಟಿ ಎಂದು ಹೇಳುತ್ತಾರೆ. ಆದರೆ ಬರೀ ಫೌಂಡೇಷನ್‌ಗೇ 10 ಸಾವಿರ ರೂಪಾಯಿ ಖರ್ಚಾಗುತ್ತದೆ. 6 ಸಾವಿರ ರೂಪಾಯಿ ಆಥವಾ 9 ಸಾವಿರ ರೂಪಾಯಿಗಳಿಂದಕಟ್ಟಡ ಪೂರ್ತಿಯಾಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು).--12 ಸಾವಿರ ರೂಪಾಯಿಗಳನ್ನು ಒಂದು ಕೊಠಡಿ ಕಟ್ಟಲು ನಾವು ಕೊಡುತ್ತಿದ್ದೆವು ಅದು ಸಾಲುವುದಿಲ್ಲ ಎಂಬ ವಿಷಯ ಗಮನಕ್ಕೆ ಬಂದಮೇಲೆ ಒಂದು ಕೊಠಡಿಗೆ ಈಗ 20 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಆಜ್ಞೆಯಾಗಿದ್ದು ಇದನ್ನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಶ್ರೀ ಧನಂಜಯ ಕುಮಾರ್.-- ಕಟ್ಟಡ ಇಲ್ಲದೆ ಶಾಲೆಗಳನ್ನು ಹೇಗೆ ನಡೆಸುತ್ತೀರಿ ? ಓಪನ್ ಏರ್ ಥಿಯೇಟರ್ ತರಹ ನಡೆಸಿದರೆ ಪರೀಕ್ಷೆಗಳನ್ನು ಹೇಗೆ ನಡೆಸುತ್ತಾರೆ ?

ಶ್ರೀ ಬಿ. ರಾಚಯ್ಯ --ಸ್ವಂತ ಕಟ್ಟಡಗಳು ಇಲ್ಲದೇ ಇರುವ ಕಡೆ ಬಾಡಿಗೆ ಕಟ್ಟಡಗಳಲ್ಲಿ, ದೇವಸ್ಥಾನಗಳಲ್ಲಿ, ಚಾವಡಿಗಳಲ್ಲಿ ಮತ್ತು ಕೆಲವು ದಾನಿಗಳು ಕೊಟ್ಟಿರತಕ್ಕ ಕೊಠಡಿಗಳಲ್ಲಿ ಶಾಲೆಗಳನ್ನು ನಡೆಸಲಾಗುತ್ತದೆ ಸ್ವಂತ ಕಟ್ಟಡ ಇಲ್ಲದೇ ಇರತಕ್ಕ 563 ಶಾಲೆಗಳಿದ್ದು ಅವುಗಳಿಗೆ ಕಟ್ಟಡ ಕಟ್ಟಿಸುವುದಕ್ಕೆ ಅವಕಾಶ ಮಾಡಿದ್ದೇವೆ.

ಶ್ರೀ ಎಂ. ಎಸ್. ಪಾಟೀಲ್.--ಒಂದು ಕೊಠಡಿಗೆ ಮೊದಲು 12 ಸಾವಿರ ರೂಪಾಯಿ ಕೊಡುತ್ತಿದ್ದು ಅದನ್ನು ಈಗ 20 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ಅಭಿನಂದನೆಗಳು. 6 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟು ಉಳಿದ ಹಣವನ್ನು ಆ ಪ್ರದೇಶದವರು ಸಂಗ್ರಹಿಸಿ ಶಾಲಾ ಕಟ್ಟಡ ನಿರ್ಮಾಣ ಮಾಡುವ ಒಂದು ಯೋಜನೆ ಇದೆಯೆಂಬುದು ನಿಜವೇ ? ಆಥವಾ 12 ಸಾವಿರ ಕೊಡುತ್ತಿದ್ದು ಅದನ್ನು 20 ಸಾವಿರಕ್ಕೆ ಹೆಚ್ಚಿಸಿರುವುದು ನಿಜವೆ ?

ಶ್ರೀ ಅಬ್ದುಲ್ ನಜೀರ್ ಸಾಬ್ --ವಿದ್ಯಾ ಇಲಾಖೆಯಿಂದ ಕೊಡತಕ್ಕ ಅನುದಾನದಲ್ಲಿ 6 ಸಾವಿರ ರೂಪಾಯಿ ಕೊಡುತ್ತಿದ್ದುದು ನಿಜ ಹಿಂದೆ ಆ ರೀತಿ ಕೊಡುತ್ತಿದ್ದರು. ನಂತರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಕಾರ್ಯ ಕೈಗೊಂಡಾಗ 12 ಸಾವಿರ ರೂಪಾಯಿಗಳನ್ನು ಒಂದು ಕೊಠಡಿಗೆ ಕೊಡುತ್ತಿದ್ದರು ಅದು ಸಾಲುವುದಿಲ್ಲ ಎಂದು ಗೊತ್ತಾದ ಮೇಲೆ 20 ಸಾವಿರ ರೂಪಾಯಿ ಕೊಡಬೇಕೆಂದು ಆಜ್ಞೆ ಮಾಡಿದ್ದೇವೆ. ಅದು ಜಿಲ್ಲಾಧಿಕಾರಿಗಳಿಗೆ ತಲುಪಿದೆ

ಶ್ರೀ ಶಾಣಪ್ಪ.--ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಎನ್. ಆರ್ ಇ ಪಿ ಸ್ಕೀಮಿನಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡ ಬೇಕಾದರೆ ಅದನ್ನು ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳನ್ನು ಕೇಳಬೇಕೋ ಅಥವಾ ಶಿಕ್ಷಣ ಮಂತ್ರಿಗಳನ್ನು ಕೇಳಬೇಕೋ ?

ಶ್ರೀ ಅಬ್ದುಲ್ ನಜೀರ್ ಸಾಬ್.--ಒಂದು ಜಿಲ್ಲೆಗೆ ಶಾಲಾ ಕಟ್ಟಡಕ್ಕೆ ವಸ್ತುಗಳಿಗೆ ಶೇಕಡ 50ರಷ್ಟು ಕಾರ್ಮಿಕರಿಗೆ ಶೇಕಡ 50ರಷ್ಟು ಹಣವನ್ನು ಎನ್. ಆರ್. ಇ. ಪಿ. ಯಲ್ಲಿ ಕೊಟ್ಟು ವಿದ್ಯಾ ಇಲಾಖೆಗಿಂತ ನಾಲ್ಕರಷ್ಟು ಕೆಲಸ ಮಾಡುತ್ತಿದ್ದೇವೆ. ವಿದ್ಯಾ ಇಲಾಖೆಯವರು ಅವರಿಗಿರತಕ್ಕ ಬಜೆಟ್ಟಿನಲ್ಲಿ ಸಹಾಯ ಮಾಡುತ್ತಾರೆ.

ಶ್ರೀ ಬಿ ಬೈರಪ್ಪಾಜಿ --ಎನ್. ಆರ್. ಇ. ಪಿ ಸ್ಕೀಂನಿಂದ ಮತ್ತು ಇತರ ಸರ್ ಪ್ಲಾನ್‌ನಿಂದ ಶಾಲಾ ಕಟ್ಟಡಗಳನ್ನು ಕಟ್ಟಿಸುತ್ತಿದ್ದೇವೆ ಎಂದು ಮಂತ್ರಿಗಳು ಹೇಳಿದ್ದಾರೆ. ಮೊದಲು ಎನ್. ಆರ್. ಇ. ಪಿ. ಯಲ್ಲಿ 12 ಸಾವಿರ ರೂಪಾಯಿ ಕೊಡುತ್ತಿದ್ದುದನ್ನು 20 ಸಾವಿರ ರೂಪಾಯಿಗೆ ಏರಿಸಿದ್ದಾರೆ. ಸಂತೋಷ. ಆದರೆ ತಾವು ಹಣ ಕೊಡುವಾಗ ಎಸ್ಟಿಮೇಟನ್ನು ಅನುಸರಿಸಿ ಕೊಡುತ್ತಿದ್ದೀರೋ ಅಥವಾ ಸುಮ್ಮನೆ ಇಷ್ಟು ಹಣ ಎಂದು ಕೊಡುತ್ತಿದ್ದೀರೋ ? ಒಂದು ರೂಮಿಗೆ ಸುಮಾರು 16-17 ಸಾವಿರ ರೂಪಾಯಿ ಆಗುತ್ತದೆ. 20 ಸಾವಿರ ರೂಪಾಯಿ ಆಗುವುದಿಲ್ಲ ಆದ್ದರಿಂದ ಉದ್ದ, ಅಗಲ ಜಾಸ್ತಿ ಮಾಡಿ ಏನಾದರೂ ಕಟ್ಟಡ ಕಟ್ಟಿಸುತ್ತಿದ್ದಿರಾ ? ಅಥವಾ ಎಸ್ಟಿಮೇಟನ್ನು ಅನುಸರಿಸಿ ಹಣ ಕೊಡುತ್ತಿದ್ದೀರಾ ? ವಿದ್ಯಾ ಇಲಾಖೆಯಲ್ಲಿ 6 ಸಾವಿರ ರೂಪಾಯಿ ಕೊಟ್ಟು ಕಟ್ಟಡ ಕಟ್ಟಿಸುವ ಯೋಜನೆ ಇದೆ. ಆದರೆ ಆ ಹಣ ಸಾಕಾಗುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ಕೈ ಬಿಟ್ಟು ಒಂದು ರೂಮಿಗೆ ಎಷ್ಟು ಖರ್ಚಾಗುತ್ತದೋ ಅಷ್ಟು ಹಣ ಕೊಟ್ಟು ವಿದ್ಯಾ ಇಲಾಖೆಯಿಂದ ಕಟ್ಟಡ ಕಟ್ಟಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೆ?

ಶ್ರೀ ಬಿ. ರಾಚಯ್ಯ --ಎನ್ ಆರ್ ಇ. ಪಿ. ಯಿಂದ ಕಟ್ಟಡಗಳನ್ನು ಕಟ್ಟಿಸುತ್ತಿದ್ದೇವೆ. ವಿದ್ಯಾ ಇಲಾಖೆಯಿಂದ 6 ಸಾವಿರ ರೂಪಾಯಿ ಕೊಟ್ಟೂ ಕಟ್ಟಿಸುತ್ತಿದ್ದೇವೆ. ಪಟ್ಟಣಗಳಲ್ಲಿ 6 ಸಾವಿರ ರೂಪಾಯಿ ಕೊಟ್ಟು ಹಳ್ಳಿಗಾಡಿನಲ್ಲಿ ಎನ್. ಆರ್. ಇ. ಪಿ. ಯಿಂದ 20 ಸಾವಿರ ರೂಪಾಯಿಕೊಟ್ಟು ಕಟ್ಟಡಗಳನ್ನು ಕಟ್ಟಿಸುತ್ತಿದ್ದೇವೆ. ಈ ಪ್ರಕಾರ ವರ್ಷಂಪ್ರತಿ 2 ಸಾವಿರ ಕಟ್ಟಡಗಳನ್ನು ಕಟ್ಟಿಸುವ ನಿರ್ಣಯ ಆಗಿದೆ.

ಶ್ರೀ ಎಪ್. ಎ. ಕೊಪ್ಪದ.--ಹೊಸ ಶಾಲಾ ಕಟ್ಟಡ ಕಟ್ಟುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕೆಲವು ಕಡೆ ಕಟ್ಟಡ ಪೂರ್ತಿಯಾಗದ ಅರ್ಧದಲ್ಲೇ ನಿಂತಿದ್ದು ಬೀಳುವುದಕ್ಕೆ ಹತ್ತಿದೆ.

ಅಧ್ಯಕ್ಷರು --ನಿಮ್ಮ ಪ್ರಶ್ನೆ ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.--ಪೂರ್ಣವಾಗಿಲ್ಲದಿರುವ ಕಟ್ಟಡವನ್ನು ಪೂರ್ಣ ಮಾಡುತ್ತೇವೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.--ಶಾಲಾ ಕಟ್ಟಡವನ್ನು ಕಟ್ಟಿಸುವಾಗ ಮೊಟ್ಟ ಮೊದಲು ಒಂದು ಶಾಲಾಕಟ್ಟಡವೂ ಇಲ್ಲದಿರುವ ಊರಿನಲ್ಲಿ ನಂತರ ಒಂದಕ್ಕಿಂತ ಹೆಚ್ಚಾಗಿ ಅವಶ್ಯಕವಿರುವ ಊರಿನಲ್ಲಿ--ಹೀಗೆ ಆದ್ಯತೆ ಮೇಲೆ ಕಟ್ಟಡದ ಕೆಲಸ ತೆಗೆದುಕೊಳ್ಳುವಂತೆ ನಿರ್ದಿಷ್ಟ ಆದೇಶವನ್ನು ಸರ್ಕಾರದಿಂದ ಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್ --ಆ ರೀತಿ ಆದೇಶ ಇದೆ ಆದರೆ ಶಾಸಕರಿಗೂ ಸ್ವಾತಂತ್ರ್ಯ ಇದೆ. ಎನ್. ಆರ್. ಇ. ಪಿ. ಯಿಂದ ಕೆಲಸ ತೆಗೆದುಕೊಳ್ಳುವಾಗ ಶಾಸಕರ ಜೊತೆ ಸಮಾಲೋಚನೆ ನಡೆಸಿ ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಯೋಜನೆಯನ್ನು ರುಂಜೂರು ಮಾಡುತ್ತೇವೆ. ಶಾಸಕರು ಯಾವುದು ಆಗಕ್ಕೆ ಎಂಬುದನ್ನು ಹೇಳಿದರೆ ನಮ್ಮ ಕೆಲಸ ಸುಲಭವಾಗುತ್ತದೆ.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ನೇಮಕಾತಿ

290 (799) ಶ್ರೀ ಎ. ನಾಗರಾಜು (ಮಾಲೂರು) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:--

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅನುಸರಿಸುತ್ತಿರುವ ನಿಯಮಗಳೇನು ;

ಆ) ಟಿ. ಸಿ. ಹೆಚ್. ಎರಡು ವರ್ಷದ ಅವಧಿಯದಾಗಿದ್ದು, ಟಿ. ಸಿ. ತರಬೇತಿಯು ಒಂದು ವರ್ಷದ್ದಾಗಿದ್ದು, ಈ ಪರೀಕ್ಷೆಗಳಲ್ಲಿ ತೆಗೆದುಕೊಂಡ ಅಂಕಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಂಡು ಪ್ರಾಥಮಿಕ ಶಿಕ್ಷಕರ ಹುದ್ದೆಗೆ ಆಯ್ಕೆ ಮಾಡಲಾಗುತ್ತದೆ;

ಇ) ರಾಜ್ಯದಲ್ಲಿ ಕೇವಲ ಕೆಲವೇ ಟಿ. ಸಿ. ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಸರಕಾರಕ್ಕೆ ಇರುವ ತೊಂದರೆಯೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—ಅ) 1983ರ ವಿಶೇಷ ನೇಮಕಾತಿ ನಿಯಮಗಳನ್ವಯ ನೇಮಕಾತಿ ನಡೆಸಲಾಗುತ್ತಿದೆ.

ಆ) ಮೇಲೆ ಹೇಳಿದ ನಿಯಮಾವಳಿಯ ಪ್ರಕಾರ ಸರಾಸರಿ ಶೇಖಡ ಅಂಕಗಳ ಪರಿಗಣನೆಗೆ ಸಾರ್ವ